doc-540
T-P-2

Reg No B G 155 22 — 9 —72

In The State First Golden Jubilee Celebrated Paper 'Satyavadi' daily, Mysore 4

56 th Year of Publication

★

News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರೇಷನಿಂಗ್ ಜಾರಿಗೆ ತರುವಂತೆ ಒತ್ತಾಯ

ಪ್ರಾಚೀನ ಭಾರತದಲ್ಲಿ ಗೋಸಂವರ್ಧನೆ

★

ಗೋಶಾಲೆಯಲ್ಲಿ ಆಟವಾಡಿ ಗೋವುಗಳಿಗೆ ಕಷ್ಟವನ್ನು ಕೊಡಬಾರದು ; ಸಾದರಕ್ಷೆಗಳನ್ನು ಧರಿಸಿ ಗೋಶಾಲೆಯನ್ನು ಪ್ರವೇಶಿಸಬಾರದು ; ರೋಗಗ್ರಸ್ತ ಹಾಗೂ ದುರ್ಬಲವಾದ ಗೋವುಗಳ ಪಾಲನೆ ಪೋಷಣೆಗಳನ್ನು ತಮ್ಮ ಮಾತಾಪಿತೃಗಳಿಗೆ ಮಾಡುವಂತೆ ಮಾಡಬೇಕು ; ಅವುಗಳಿಗೆ ಹಿಂಸೆ ಕೊಡುವ ಯಾ ಕೊಲ್ಲುವ ವಿಚಾರವನ್ನು ಎಂದಿಗೂ ಕನಸುಮನಸ್ಸಿನಲ್ಲಿಯೂ ಮಾಡಬಾರದು ; ಗೋಶಾಲೆಯಲ್ಲಿ ರಾತ್ರಿಯವೇಳೆ ದೀಪವನ್ನು ಉರಿಸತಕ್ಕದ್ದು ; ಗೋಪಾಲನೆಯ ಸಂಬಂಧದಲ್ಲಿ ನಮ್ಮ ಪೂರ್ವಜರಿಗೆ ತಿಳಿದಿದ್ದ ವಿಷಯವು ಇಂದಿನ ಪಾಶ್ಚಾತ್ಯ ವೈಜ್ಞಾನಿಕ ಪ್ರಯೋಗದಿಂದ ಯಥಾರ್ಥವಾದುದೆಂದು ಸ್ಥಾಪಿಸಲ್ಪಟ್ಟಿದೆ.

ಗೋವಿನಿಂದ ಕ್ಷೀರವನ್ನು ಪಡೆಯುವ ಕಲೆಯಲ್ಲಿಯೂ ಸಹ ನಮ್ಮ ಶಾಸ್ತ್ರೀಯ ಗ್ರಂಥಗಳಲ್ಲಿ ವಿಶದವಾಗಿ ಪ್ರಕಾಶಿಸಲ್ಪಟ್ಟಿದೆ; ಹಾರೀತರ ಅನುಸಾರವಾಗಿ ಹಸುವಿನಿಂದ ಹಾಲನ್ನು ಚತುರತೆಯಿಂದಲೂ, ಸೂಕ್ಷ್ಮತೆಯಿಂದಲೂ ಪಡೆಯತಕ್ಕದ್ದು ; ಮೂರನೆಯ ತಿಂಗಳಲ್ಲಿ ಎರಡೇ ಸ್ತನದಿಂದಲೂ ನಾಲ್ಕನೆಯ ತಿಂಗಳಲ್ಲಿ ಮೂರು ಸ್ತನದಿಂದಲೂ ಹಾಲು ಕರೆಯತಕ್ಕದ್ದು.

ಗೋವುಗಳ ಸ್ವಸ್ಥತೆಗಾಗಿ ಪೂರ್ವಕರು ಅನೇಕ ಯಜ್ಞಗಳನ್ನು ನಡೆಸುತ್ತಿದ್ದರು ; ಗೃಹ ಸೂತ್ರದಲ್ಲಿಯೂ ಸಹ ಪಶುಗಳ ಸ್ವಾಸ್ಥ್ಯಕ್ಕೋಸ್ಕರ ಮಾಡುತ್ತಿದ್ದ ಧರ್ಮಕಾರ್ಯಗಳ ಉಲ್ಲೇಖವು ಕಾಣಸಿಗುತ್ತದೆ ; ಭೂಮಿಯು ಗೋಚರವಾದಂದಿನಿಂದ ಪ್ರಪ್ರಥಮವಾಗಿ ಅಂದಿನಿಂದಲೂ ಗೋಪೂಜೆಯು ವೇದಮಂತ್ರಾನುಸಾರವಾಗಿ ನಡೆಯುತ್ತಾ ಬಂದಿದೆ ; ಹಸುವಿಗೆ ಪ್ರಸವ ಉಂಟಾದ ಮೇಲೆ ವಿಲೀಯನ ಯಜ್ಞವನ್ನು ಮಾಡಿ, ಪ್ರಾರ್ಥಿಸುತ್ತಿದ್ದುದು ಏನೆಂದರೆ— ' ಹೇ ಪರಾಕ್ರಮಿಯಾದ ಇಂದ್ರನೇ ನಮ್ಮ ಈ ಗೋವುಗಳ ರಕ್ಷಣೆ ಮಾಡು ' ಎಂದು ಪ್ರಾರ್ಥಿಸಿ ನಂತರ ಮನೆಗೆ ಹಿಂತಿರುಗುತ್ತಿದ್ದರು ; ' ಪೂಜಿಸಲ್ಪಟ್ಟ ದೇವತೆಯು ನಮ್ಮ ಗೋವುಗಳನ್ನು ರಕ್ಷಿಸುತ್ತಾರೆ' ಎಂದು ನೆಮ್ಮದಿಯಿಂದ ಇರುತ್ತಿದ್ದರು.

ನಮ್ಮ ಪೂರ್ವೀಕರು ಗೋಪಾಲನಾಶಾಸ್ತ್ರದೊಡನೆ ಗೋಚಿಕಿತ್ಸಾ ವಿಧಾನದಲ್ಲಿಯೂ ಪ್ರವೀಣರಾಗಿದ್ದರು ; ಅಗ್ನಿ ಪುರಾಣದಲ್ಲಿ ಗೋವುಗಳಿಗೆ ಬರುವ ವಿವಿಧ ರೋಗಗಳ ಬಗ್ಗೆ ವ್ಯಾಖ್ಯೆ ಇದೆ ಪಾಂಡವರಲ್ಲಿ ಕಿರಿಯನಾದ ನಕುಲನು ಪಶುಹೃದಯವನ್ನು ಬಲ್ಲವನಾಗಿದ್ದನಲ್ಲದೆ, ಪಶುಚಿಕಿತ್ಸಾ ವಿಧಾನದಲ್ಲಿಯೂ ವಿಶೇಷಜ್ಞತೆಸಿಸಿಕೊಂಡಿದ್ದನು ಪುರಾಣ ಮತ್ತು ಆಯುರ್ವೇದದಲ್ಲಿ ಪಶುಚಿಕಿತ್ಸೆಯ ಬಗ್ಗೆ ವಿಚಾರಮಾಡಲಾಗಿದೆ ; ಪಶುಗಳ ಸಾಂಕ್ರಾಮಿಕ ರೋಗಗಳ ಬಗ್ಗೆ ಪ್ರಾಚೀನ ಕಾಲದಲ್ಲಿಯೇ ನಮ್ಮ ಪೂರ್ವಿಕರು ಅಂತಿದ್ದರು ಗಿರನಾರದಲ್ಲಿ ಪ್ರಾಪ್ತವಾದ ಅಶೋಕನ ಶಿಲಾ ಲೇಖವು ಈ ರೀತಿ ವ್ಯಕ್ತಪಡಿಸುತ್ತದೆ- ' ಇಡೀ ಸಾಮ್ರಾಜ್ಯದಲ್ಲಿ ಮತ್ತು ಪರರಾಜ್ಯದಲ್ಲಿಯೂ ಎರಡು ಪ್ರಕಾರದ ಚಿಕಿತ್ಸಾ ವಿಧಾನವನ್ನು ಜಾರಿಗೆ ತರಲಾಯಿತು- ಮನುಷ್ಯರಿಗಾಗಿ ಮತ್ತು ಪಶುಗಳಿಗಾಗಿ "

ರೇಷ್ ಜಾರಿಯಾಗಲಿ

ಹುಬ್ಬಳ್ಳಿ— ಬೆಲೆಗಳು ಗಗನಕ್ಕೆ ಏರುತ್ತಿರುವುದರಿಂದ ಸರಕಾರವು ಸೂಕ್ತ ಆಹಾರ ಸರಬರಾಜಿನ ವ್ಯವಸ್ಥೆಮಾಡಿ, ಶಾಸನ ಬದ್ಧ ರೇಷನಿಂಗ್ ಜಾರಿಗೆ ತರಲು ಕಾರ್ಮಿಕರ ಸಂಘಟನೆಗಳು ಬಡವರ ಪ್ರತಿನಿಧಿಗಳು ಸರಕಾರವನ್ನು ಒತ್ತಾಯ ಮಾಡಿರುವರು.

★

ನಕಲೀ ಬೀಡಿ ಲೇಬಲ್ ವಶ

ಮೈಸೂರು— ಒಂದೂವರೆ ಕೋಟಿ ನಕಲಿ ಬೀಡಿಲೇಬಲ್‌ಗಳು ಮತ್ತು ಸುಮಾರು 2500 ಖೋಟಾ ಬೀಡಿಗಳನ್ನು ಮಂಡಿ ಪೋಲೀಸಿನವರು ವಶಪಡಿಸಿಕೊಂಡು, ಒಬ್ಬ ಮಹಿಳೆ ಸೇರಿ 10 ಮಂದಿಯನ್ನು ಬಂಧಿಸಿದರು.

★

ಕಚೇರಿ ರೆಕಾರ್ಡುಗಳ ಮಾರಾಟ !

ಗುಡಿಬಂಡೆ— ಅಸಿಸ್ಟೆಂಟ್ ಎಜುಕೇಷನ್ ಆಫೀಸಿನ ರೆಕಾರ್ಡುಗಳು, ರಿಜಿಸ್ಟರುಗಳು, ಸೆಜಿಟ್ಟುಗಳು ಇತ್ಯಾದಿ 8 ಗೋಣಿ ಚೀಲದಷ್ಟನ್ನು ಮಾರಿದ ಆಪಾದನೆ ಕುರಿತು ವಿದ್ಯಾಭಾಸ ಇಲಾಖಾ ಜಂಟಿ ಡೈರೆಕ್ಟರ್ ಶ್ರೀ ರಾರ್ಜ ವಿಚಾರಣೆ ನಡೆಸಿದರು.

★

ಮಹಾ ಅದೃಷ್ಟ ಮಹಿಳೆ

ನ್ಯೂಯಾರ್ಕ್— ನ್ಯೂಯಾರ್ಕು ರಾಜ್ಯದ " ತಕ್ಷಣ ಕೋಟ್ಯಾಧೀಶ್ವರರು " ಲಾಟರಿಯಲ್ಲಿ 61 ವರ್ಷದ ಸತಿ ಮಿಜರಾಕ್‌ಗೆ ಒಂದು ಮಿಲಿಯ (ರೂ. 73 ಲಕ್ಷ ಡಾಲರು ಬಹುಮಾನ ದೊರೆಯಿತು — ಈಕೆ ಕೊಂಡಿದ್ದು 3 ಡಾಲರುಗಳ ಟಿಕೀಟು

★

ಖೋಟಾ ಮಾರ್ಕ್ಸ್ ಕಾರ್ಡು ಪ್ರಕರಣ

ಬೆಂಗಳೂರು— ಖೋಟಾ ಮಾರ್ಕ್ಸ್ ಕಾರ್ಡು ಗಳಾಟೆಯಲ್ಲಿ ನೂಜಿ ಮಂತ್ರಿಗಳ ಮಕ್ಕಳು ಸಿಕ್ಕಿಬಿದ್ದಿದ್ದಾರೆಂದು ಹೇಳಲಾಗಿದೆ.

ಕ್ಷಾಮದ ರಾಜ್ಯ

ಪಾಟ್ನಾ—ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿ ಇದೆಯೆಂದು ಘೋಷಿಸಿ. ಸೂಕ್ತ ಪರಿಹಾರವನ್ನು ಕೈಕೊಳ್ಳಬೇಕೆಂದು ಒತ್ತಾಯ ಮಾಡುವದಕ್ಕಾಗಿ ಕಮ್ಯೂನಿಸ್ಟು ಧ್ವಜದ ಕೆಳಗೆ 2 ಲಕ್ಷ ಜನರು ಬೀಹಾರು ಶಾಸನ ಸಭೆಯ ಮುಂದೆ ಗುರುವಾರ ಪ್ರದರ್ಶನ ನಡೆಸಿದರು.

★

ಮಿತವ್ಯಯ ದಸರಾ

ಬೆಂಗಳೂರು— ರಾಜ್ಯದ ಅನೇಕ ಭಾಗಗಳಲ್ಲಿ ತೀವ್ರ ಅಭಾವ ಪರಿಸ್ಥಿತಿ ಇರುವುದರಿಂದ; ಈ ವರ್ಷ ಮೈಸೂರಿನ ದಸರಾ ಸಮಾರಂಭವನ್ನು ಅತ್ಯಂತ ಮಿತವ್ಯಯದಿಂದ ನಡೆಸಲಾಗುವದೆಂದು ಹೇಳಲಾಗಿದೆ.

★

ಕಳ್ಳ ರಾಜಕಾರಿಣಿ

ಜಕರ್ತ— ಟರ್ಕಿಯಲ್ಲಿ ಅಮೇರಿಕಾ ಖೋಟಾ ಡಾಲರು ಹೊಂದಿದ್ದ ಇಂಡೋನೇಷಿಯಾ ರಾಜಕಾರಣಿಯ ತಲೆಬೋಳಿಸಿ ಜೈಲಿಗೆ ಹಾಕಿರುವದಕ್ಕೆ ಟರ್ಕಿಗೆ ಪ್ರತಿಭಟನೆ ಸಲ್ಲಿಸಲಾಗಿದೆ.

★

ಯುಗಾಂಡಾ—ಟಾಂಜಿಯಾ ಘರ್ಷಣೆ

ಕಂಪಾಲಾ — ಮೇಲ್ಕಂಡ ರಾಜ್ಯಗಳ ಸಮರ ಭೀಕರಗೊಳ್ಳುತ್ತಿದೆ— ಯುಗಾಂಡ್ಯ ಅಧ್ಯಕ್ಷರು ತಮ್ಮ ನೀತಿಗೆ ವಿರುದ್ಧವಾಡವರನ್ನೆಲ್ಲಾ ಬಂಧಿಸುತ್ತಿದಾರೆ : ಆಫ್ಟಯ ಮುಖ್ಯ ನ್ಯಾಯಾಧೀಶರೂ ಬಂಧಿಸಲ್ಪಟ್ಟಿದ್ದಾರೆ

★

ಮಾದರಿ ಶಾಲೆಗಳು

ನವದೆಹಲಿ— ವಿದ್ಯಾ ಯೋಜನೆಯಲ್ಲಿ ಶಿಫಾರಸು ಮಾಡಲಾಗಿರುವ ಮಾದರೀ ಶಾಲೆಗಳಿಗಾಗಿ ರೂ. 396 ಕೋಟಿ ಖರ್ಚಾಗುವದೆನ್ನಲಾಗಿದೆ.

ವಿಶ್ವದಲ್ಲಿ ಬಡತನ ಹೆಚ್ಚುತ್ತಿದೆ

ವಾಷಿಂಗ್ಟನ್— ವಿಶ್ವ ಜನಸಂಖ್ಯೆಯ ಶೇಕಡಾ 96 ಹೊಂದಿರುವ 75 ದೇಶಗಳಲ್ಲಿ ಆದಾಯ ಹೆಚ್ಚಿದ್ದರೂ, ಉತ್ಪಾದನೆ ಏರಿದ್ದರೂ, ವಿಶ್ವದಲ್ಲಿ ಬಡತನ ಹೆಚ್ಚುತ್ತಿರುವುದು ಎಂದು ವಿಶ್ವ ಬ್ಯಾಂಕು ಅಧ್ಯಕ್ಷ ಮೆಕ್‌ನಾಮರಾ ಹೇಳಿದರು.

ಈಜಿಪ್ಟಿನ ಅಕ್ಕಿ

ಹೈದರಾಬಾದು— ಆಂಧ್ರಪ್ರದೇಶಕ್ಕೆ ಕೇಂದ್ರವು 2800 ಟ ಈಜಿಪ್ಟಿನ ಅಕ್ಕಿಯಬಿಡುಗಡೆ ಮಾಡಿದೆ.

ಷೇಕ್ ಅಬ್ದುಲ್ಲರ ಸ್ಪಲಾಪ

ಶ್ರೀನಗರ— ಕಾಶ್ಮೀರದ ಸಮಸ್ಯೆ ವಿಚಾರದಲ್ಲಿ ಭಾರತವು ಪಾಕಿಸ್ತಾನದೊಡನೆ ಯಾವ ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ 5 ಮಿಲಿಯ ಕಾಶ್ಮೀರಿಗಳ ಮನೋಭಾವವನ್ನು ಪರ್ಯಾಲೋಚಿಸದಿದ್ದರೆ, ತಾವು ಭಾರತ ಸರಕಾರವನ್ನು ಎದುರಿಸಲು ಹಿಂತೆಗೆಯುವುದಿಲ್ಲವೆಂದು ಷೇಕ್ ಅಬ್ದುಲ್ಲರು ಹೇಳಿದರು.

ಮಳಿಂಯನ ಕೃಪೆಗಾಗಿ

ಸತ್ಯಂಪೇಟೆ— ಮಳಿಂಯನ ಆಗಮನಕ್ಕಾಗಿ ದೇವರಲ್ಲಿ ಮೊರೆ ಇಡುವುದು ಒಂದೇ ಮಾರ್ಗವೆಂದು ನಂಬಿದ ಇಲ್ಲಿಯ ಸರ್ವಜನರು ಊರಿನಲ್ಲಿ ಭಜನೆ-ದೀಪಾರಾಧನೆ-ಪ್ರವಚನ-ಭಾಷಣ ಮುಂತಾದ ಧಾರ್ಮಿಕ ಕಾರ್ಯಗಳನ್ನು ಕೈಕೊಂಡು ಇಡೀ ಶ್ರಾವಣ ಮಾಸವನ್ನು ಒಂದು ವ್ರತದಂತೆ ಆಚರಿಸಿದರು.

SHAKTI SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್ 22-9-72ರಂದ ಅನೋಫ 3ನೇ ವಾರ

ಫಿಲಂಯುಗ ಅರ್ಪಿಸುವ

ಆಂ ಖೊ ಆಂ ಖೊ ಮೆ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ : ರಾಖಿ, ರಾಜೇಶ್ ರೋಷನ್ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10-30 ಕ್ಕೆ ಜೋಟೇಸಿ ಮುಲಾಖತ್

ಅಪೆರಾ 22 9 72 ರಿಂದ

ಶ್ರೀ ನವನೀತ್ ಫಿಲಂಸ್‌ತವರ ಅಪೋಫ ತಮಿಳು ಚಿತ್ರ

ಪುಗುಂದ ವೀಡು

ನಿರ್ದೇಶನ : ಪಟ್ಟು

ಪ್ರತಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯು ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆನೆ-ಹುಡುಗ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore